ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು):-

1) ಹೌದು. ಹಿಂದಿನ ಮುಖ್ಯಮಂತ್ರಿಯವರು 3.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲು ಆದೇಶಿಸಿದ್ದರು. ಸರ್ಕಾರದ ಆದೇಶ ಸಂಖ್ಯೆ:ವನಇ 22 ಟಿಎಂಎಂ 94 ದಿನಾಂಕ:31.3.1994ರಲ್ಲಿ ಪುತ್ತೂರು ಪುರಸಭೆಗೆ 4.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಮೊತ್ತವನ್ನು ಪಾವತಿಸದಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

2) ಇಲ್ಲ. ಉದ್ಭವಿಸುವುದಿಲ್ಲ.

ವಿಷಯ:- ಮಂಗಳೂರು ವಿಮಾನ ನಿಲ್ದಾಣದಲ್ಲಿ ಕಾರ್ಗೋ ಕಾಂಪ್ಲೆಕ್ಸ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 204 (421)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಗಳೂರು ವಿಮಾನ ನಿಲ್ದಾಣದಲ್ಲಿ ಕಾರ್ಗೋ ಕಾಂಪ್ಲೆಕ್ಸ್ ತೆರೆಯುವ ಬಗ್ಗೆ ರಾಜ್ಯ ಸರ್ಕಾರವು ಉದ್ದೇಶ ಹೊಂದಿದೆಯೇ?

ಆ) ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಮಾತುಕತೆ ನಡೆಸಲಾಗಿದೆಯೇ? ಹಾಗಿದ್ದಲ್ಲಿ ಅದರ ಫಲಿತಾಂಶವೇನು?

ಶ್ರೀ ಆರ್.ವಿ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಮತ್ತು ಮೂಲಭೂತ ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಅ) ರಾಜ್ಯ ಸರ್ಕಾರದ ಕೈಗಾರಿಕಾ ನೀತಿ ನಿರೂಪಣೆ - 1996ರಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತವು (ಕೆಎಸ್ಐಐಡಿಸಿ) ಮಂಗಳೂರು ವಿಮಾನ ನಿಲ್ದಾಣದಲ್ಲಿ ಕಾರ್ಗೋ ಕಾಂಪ್ಲೆಕ್ಸ್ ತೆರೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

ಆ) ಕೆ.ಎಸ್.ಐ.ಐ.ಡಿ.ಸಿ. ಸ್ವಾಮ್ಯಕ್ಕೊಳಪಡುವ ಎಂ.ಎಸ್.ಐ.ಎಲ್.ಸಂಸ್ಥೆಯು ಈ ಬಗ್ಗೆ ಬೇಡಿಕೆ ಮತ್ತು ಅಂದಾಜು ವೆಚ್ಚಗಳ ಮಾಹಿತಿಯನ್ನು ಸಂಗ್ರಹಿಸುತ್ತಿದೆ. ಅದಾದನಂತರ ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಲಾಗುವುದು.

ವಿಷಯ:- ಮೈಸೂರು ನಗರಕ್ಕೆ ನೀರಿನ ಸೌಲಭ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 205 (494)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ನಗರದ ಯಾವ ಯಾವ ಬಡಾವಣೆಗಳಿಗೆ ಕಾವೇರಿ ನೀರಿನ ಸೌಲಭ್ಯ ಕಲ್ಪಿಸಲಾಗಿದೆ?

ಆ) ಉಳಿದ ಬಡಾವಣೆಗಳಿಗೆ ಕಾವೇರಿ ನೀರಿನ ಸೌಲಭ್ಯ ಕಲ್ಪಿಸಿಕೊಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಈ ಕ್ರಮಗಳ ಜಾರಿ ಅವಧಿಯನ್ನು ತಿಳಿಸುವುದು.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಮೈಸೂರು ನಗರದ ವ್ಯಾಪ್ತಿಯಲ್ಲಿ ಬರುವ ವಿ.ವಿ.ಮೊಹಲ್ಲಾ, ದೇವರಾಜ ಮೊಹಲ್ಲಾ, ಜಾಮರಾಜ ಮೊಹಲ್ಲಾ, ಖಿಲ್ಲೆ ಮೊಹಲ್ಲಾ, ನಜರ್‌ಬಾದ್ ಮೊಹಲ್ಲಾ, ಲಷ್ಕರ್‌ಮೊಹಲ್ಲಾ ಹಾಗೂ ಮಂಡಿ ಮೊಹಲ್ಲಾ, ಈ ಭಾಗಗಳ ಸುಮಾರು ಶೇ.75ರಷ್ಟು ಭಾಗಕ್ಕೆ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಉಳಿದ ಶೇ.25ರಷ್ಟು ಪ್ರದೇಶಗಳಿಗೆ ಕೊಳವೆ ಬಾವಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಆ) ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಡಾವಣೆಗಳಿಗೆ ಕಾವೇರಿ ನೀರು ಸರಬರಾಜು ಮಾಡಲು ಈ ಕೆಳಕಂಡ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ. ಅ) 650 ಲಕ್ಷ ರೂ.ಗಳ ಅಂದಾಜಿನ ವಿತರಣಾ ವ್ಯವಸ್ಥೆ ನವೀಕರಣ ಆ) ನಗರಾಭಿವೃದ್ಧಿ ಪ್ರಾಧಿಕಾರದ ಠೇವಣಿ ಕೊಡುಗೆ ಹಣದ 170.00 ಲಕ್ಷ ರೂ.ಗಳ ಮತ್ತು 93 ಲಕ್ಷ ರೂ. ಅಂದಾಜಿನಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇ) ಮೈಸೂರು ನಗರಕ್ಕೆ 4ನೇ ಹಂತದ ಯೋಜನೆಯನ್ನು 35.80 ಕೋಟಿಗಳ ಅಂದಾಜಿನಡಿಯಲ್ಲಿ ಏಷ್ಯಾ ಅಭಿವೃದ್ಧಿ ಬ್ಯಾಂಕ್‌ರವರ ನೆರವಿನಿಂದ ಕೈಗೊಳ್ಳಲಾಗುವುದು.

ಇ) ಮೈಸೂರು ನಗರ ನೀರು ಸರಬರಾಜು ವ್ಯವಸ್ಥೆ ಪೂರೈಸಲು ರೂ.650.00 ಲಕ್ಷಗಳ ಅಂದಾಜಿನ ಕಾಮಗಾರಿಗಳನ್ನು ಹಾಗೂ ರೂ.170.00 ಲಕ್ಷಗಳ ಅಂದಾಜಿನ ಕಾಮಗಾರಿಗಳನ್ನು ಡಿಸೆಂಬರ್ 97ರ ಅಂತ್ಯದೊಳಗೆ ಮುಗಿಸಬಹುದಾಗಿದೆ. ಈ ಕಾಮಗಾರಿಗಳು ಮುಗಿದಲ್ಲಿ ಮೈಸೂರು ನಗರಕ್ಕೆ 8 ಎಂಜಿಡಿ ಹೆಚ್ಚುವರಿ ನೀರು ದೊರಕುತ್ತದೆ. 35.80 ಕೋಟಿ ರೂ. ಯೋಜನೆಯನ್ನು ಸುಮಾರು 4 ವರ್ಷಗಳಲ್ಲಿ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ವಿಷಯ:- ಸಿಂಧೂರಿನಲ್ಲಿ ಲಿಡ್‌ಕರ್ ಡಿಪೋ ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 207 (99)

ಶ್ರೀ ಕೆ.ವಿರುಪಾಕ್ಷಪ್ಪ (ಸಿಂಧನೂರು):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಿಂಧನೂರಿನಲ್ಲಿ ಹೊಸದಾಗಿ ಲಿಡ್ಕರ್ ಡಿಪೋ ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?